ಶ್ರೀ ಅಬ್ದುಲ್ ನಜೀರ್‌ಸಾಬ್.—(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).

ಅ) ಹರಿಹರ ತಾಲ್ಲೂಕಿನಲ್ಲಿ ಒಟ್ಟು ಹನ್ನೊಂದು ಸಣ್ಣ ಪ್ರಮಾಣದ ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.

ಗಮನ ಸೆಳೆಯುವ ಸೂಚನೆ

ಬೇಲೂರು ತಾಲ್ಲೂಕಿನ ನರಸಾಪುರ ಗ್ರಾಮದ ಬೋವಿ ಕಾಲೋನಿಯಲ್ಲಿ ದಲಿತರ ಮೇಲಿನ ಹಲ್ಲೆ

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ) —ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ನರಸಾಪುರ ಗ್ರಾಮದ ಬೋವಿ ಕಾಲೋನಿಯಲ್ಲಿ ದಲಿತರ ಮೇಲೆ ನಡೆದ ಹಲ್ಲೆಯ ಬಗ್ಗೆ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ನನ್ನ ಹೇಳಿಕೆ ಈ ರೀತಿ ಇದೆ.

ನರಸೀಪುರ ಪಡ್ಡರ ಹಟ್ಟಿ ಗ್ರಾಮದಲ್ಲಿ ಹಿರೆ ಬೋವಿ ಜನಾಂಗದ ಮನೆಗಳಿದ್ದು ಕೂಲಿ ಮತ್ತು ಪೌರೋಹಿತ್ಯದಿಂದ ಜೀವನ ಸಾಗಿಸುತ್ತಿರುತ್ತಾರೆ. ಸದರೀ ಹಿರೆ ಮನೆಗಳ ಪೈಕಿ ರಾಮಬೋವಿ ಮತ್ತು ಆತನ ತಮ್ಮ ಯಲ್ಲಾಬೋವಿಯ ಒಂದು ಗುಂಪು ಇದ್ದು, ಉಳಿದ ಮನೆಗಳು ರಾಜಾಬೋವಿಯ ನಾಯಕತ್ವದಲ್ಲಿ ಮತ್ತೊಂದು ಗುಂಪು ಇರುತ್ತದೆ. ರಾಮಬೋವಿ ಮತ್ತು ರಾಜಾಬೋವಿ ಅವರೀರ್ವರ ನಡುವೆ ಜಮೀನಿನ ಮಧ್ಯೆ ಇದ್ದ ಮರ ಕಡಿಯುವ ವಿಚಾರದಲ್ಲಿ ಆಗಿಂದಾಗ್ಗೆ ಜಗಳವಾಗುತ್ತಿತ್ತು. ಈ ವಿಚಾರವಾಗಿ ರಾಮಬೋವಿಯು ಬೇಲೂರು ಪೋಲೀಸ್ ಠಾಣೆಗೆ ದೂರು ಕೊಟ್ಟಾಗ, ಪೋಲೀಸರು ವಿಚಾರಣೆಗಾಗಿ ಸ್ಥಳಕ್ಕೆ ಹೋದಾಗ ರಾಜಬೋವಿ ವಿಚಾರಣೆಗೆ ಹಾಜರಾಗದೆ ತಪ್ಪಿಸಿಕೊಂಡು, ರಾಮಬೋವಿ ಮತ್ತು ಆತನ ಕಡೆಯವರಿಗೆ ಕಿರುಕುಳ ಕೊಡುತ್ತಿದ್ದನು. ಆದ್ದರಿಂದ ರಾಮಬೋವಿಯು ಪುನ: ಬೇಲೂರು ಪೋಲೀಸ್ ಠಾಣೆಗೆ ದೂರು ನೀಡಲಾಗಿ, ದಿನಾಂಕ ೧೯-೧೦-೧೯೮೫ ರಂದು ಆರಕ್ಷಕ ಉಪ ನಿರೀಕ್ಷಕರು ಖುದ್ದಾ ವಿಚಾರಣೆ ಮಾಡಲು ಗ್ರಾಮಕ್ಕೆ ಭೇಟಿ ಕೊಟ್ಟಾಗ, ರಾಜಬೋವಿ ಮತ್ತು ಆತನ ಅನುಯಾಯಿಗಳು ಗ್ರಾಮದಲ್ಲಿರಲಿಲ್ಲ. ಗ್ರಾಮದ ಮುಖ್ಯಸ್ಥರುಗಳನ್ನು ಕರೆದು ಯಾವ ವಿಧವಾದ ಗುಂಪು ಘರ್ಷಣೆಗೆ ಅವಕಾಶ ಕೊಡದಂತೆ ಮತ್ತು ರಾಮಬೋವಿ ಮತ್ತು ಆತನ ಕಡೆಯವರಿಗೆ ತೊಂದರೆ ಕೊಡದಂತೆ ತಿಳುವಳಿಕೆ ಹೇಳಿ ರಾಜಬೋವಿ ಮತ್ತು ಇತರರನ್ನು ಹಳೇಬೀಡು ಉಕ್ಕಡ ಠಾಣೆಗೆ ಹೇಳಿಕೆ ಕೊಡಲು ಕಳುಹಿಸಿಕೊಡಲು ತಿಳಿಸಿ ವಾಪಸ್ಸು ಹೋದರು. ಆರಕ್ಷಕ ಉಪನಿರೀಕ್ಷರು ಗ್ರಾಮವನ್ನು ಬಿಟ್ಟು ಹೋದ ನಂತರ ರಾಜಾಬೋವಿ ಮತ್ತು ಆತನ ಕಡೆಯವರು ಗ್ರಾಮದಲ್ಲಿ ಜಗಳವನ್ನು ಮಾಡಿಕೊಂಡು ರಾಮಬೋವಿಯ ಕಡೆಯವರಿಗೆ ಹೊಡೆದಾಗ ರಾಮಬೋವಿಯು ತಕ್ಷಣ ಹಳೇಬೀಡು ಉಕ್ಕಡ ಠಾಣೆಗೆ ಹೋಗಿ ವಿಷಯ ತಿಳಿಸಿದನು. ಉಕ್ಕಡ ಠಾಣೆಯ ಮುಖ್ಯ ಪೇದೆಯು ತಮ್ಮ ಸಿಬ್ಬಂದಿಯೊಂದಿಗೆ ತಕ್ಷಣ ವಡ್ಡರಹಟ್ಟಿ ಗ್ರಾಮಕ್ಕೆ ಬಂದು ಅಲ್ಲಿಯ ವಿದ್ಯಮಾನಗಳನ್ನು ಅವಲೋಕಿಸಿದಾಗ ಜನಗಳೆಲ್ಲಾ ಪ್ರಾಣಭೀತರಾಗಿ ಕೂಗಾಟ ಮಾಡುತ್ತಿದ್ದರು. ಸದರಿ ವಿಷಯವನ್ನು ಫೋನ್ ಮುಖಾಂತರ ಆರಕ್ಷಕ ಉಪನಿರೀಕ್ಷರಿಗೆ ತಿಳಿಸಲಾಯಿತು, ಬಸವರಾಜಪುರ ಮತ್ತು ಇತರೆ ಒಕ್ಕಪಕ್ಕದ ರಾಮಬೋವಿಯ ನೆಂಟರಿಷ್ಟರು ವಿಷಯ ತಿಳಿದು ದೊಣ್ಣೆ ಮತ್ತು ಕೋಲು ಕತ್ತಿಗೆಳನ್ನು ಹಿಡಿದುಕೊಂಡು ನರಸೀಪುರ ವಡ್ಡರ ಹಟ್ಟಿಗೆ ಬಂದು ರಾಜಬೋವಿಯ ಕಡೆಯವರ ಮೇಲೆ ಜಗಳ ಮಾಡುತ್ತಿದ್ದಾಗ ಆ ಸಮಯಕ್ಕೆ ಅಂದರೆ ೧೯-೧೦-೮೫ ರಂದು ಸೋಮವಾರ ರಾತ್ರಿ ೧೦-೩೦ ಘಂಟೆಯ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು ತಮ್ಮ ಸಿಬ್ಬಂದಿಯೊಂದಿಗೆ ವಡ್ಡರಹಟ್ಟಿ ಗ್ರಾಮಕ್ಕೆ ಬಂದಾಗ ಗ್ರಾಮದಲ್ಲಿ ವಿದ್ಯುತ್ ಇಲ್ಲದೆ ಕತ್ತಲು ತುಂಬಿದ್ದರಿಂದ ಜನಗಳೆಲ್ಲಾ ಅವರವರ ಮನೆಯೊಳಗೆ ಇದ್ದರು. ನಿಜ ಸಂಗತಿಯನ್ನು ತಿಳಿಯಲು ಗ್ರಾಮಸ್ಥರನ್ನು ಕೋರಲಾಗಿ ಯಾರೊಬ್ಬರೂ ಮನೆಯಿಂದ ಹೊರಗೆ ಬರಲಿಲ್ಲ. ಆ ವೇಳೆಯಲ್ಲಿ ಬಸವರಾಜಪುರದ ರಾಮಬೋವಿಯ ಕಡೆಯವರು ಬಾಗಿಲುಗಳನ್ನು ತಟ್ಟುತ್ತಿದ್ದರು. ಆರಕ್ಷಕ ಉಪನಿರೀಕ್ಷಕರು ಪುನ; ನಿಜ ಸಂಗತಿಯನ್ನು ಮನೆಯಿಂದ ಹೊರಗೆ ಬಂದು ತಿಳಿಸಿ ಎಂದು ವಿನಂತಿಸಿಕೊಂಡಾಗ

ಕೆಲವರು ಮನೆಯ ಬಾಗಿಲುಗಳನ್ನು ತೆರೆದು ಹೊರಗೆ ಬಂದಾಗ ಬಸವರಾಜ ಪುರದ ರಾಮಬೋವಿಯ ಕಡೆಯವರು ದೊಣ್ಣೆ ಮತ್ತು ಕೋಲು ಕತ್ತಿಗಳಿಂದ ರಾಜಬೋವಿಯ ಕಡೆಯವರಿಗೆ ಹೊಡೆದರು. ರಾತ್ರಿ ಕತ್ತಲಾದ್ದರಿಂದ ಪೊಲೀಸರಿಗೆ ನಿಜವಾದ ಆರೋಪಿಗಳನ್ನು ಗುರ್ತಿಸಲಾರದೆ ಗಲಾಟೆಯನ್ನು ಹತೋಟಿಗೆ ತರಲು ಜನಗಳನ್ನು ಬೆದರಿಸಲು ಮಾತ್ರ ಬಲಪ್ರಯೋಗ ಮಾಡಿದರು. ಆ ಜನಗಳಲ್ಲಿ ಯಾವ ಗುರಿಹಿಗೆ ಸೇರಿದವರೇ ಬಂದಾ ಗೊತ್ತಾಗಲಿಲ್ಲ. ಮತ್ತು ಬಸವರಾಜಪುರದ ಜನರು ರಾಜಬೋವಿ ಕಡೆ ಗುಂಪಿಗೆ ಹೊಡೆದವರಾರೆಂಬುದನ್ನು ಗುರ್ತಿಸಲಾಗಲಿಲ್ಲ ಈ ಗಲಾಟೆಯಲ್ಲಿ ಎರಡು ಗುಂಪುಗಳ ಮಧ್ಯೆ ನಡೆದ ಘರ್ಷಣೆಗಳಿಂದ ಕೆಲವು ಜನರಿಗೆ ಗಾಯಗಳಾಗಿದ್ದು ಆಲ್ಲದೆ ಪೋಲೀಸರು ಚದುರಿಸಲು ಮಾಡಿದ ಬಲ ಪ್ರಯೋಗ ದಿಂದ ಆಗಲಿಲ್ಲ ಪೊಲೀಸರು ಅನಿವಾರ್ಯ ಸಂದರ್ಭದಲ್ಲಿ ಲಾಠಿ ಮಾತ್ರ ಉಪಯೋಗಿಸಿ. ಈ ಗುಂಪು ಘರ್ಷಣೆಗಳಿಂದ ಮಾರಮ್ಮ ಎಂಬ ೧೨ ವರ್ಷದ ಹುಡುಗಿಗೆ ಕೋಲು ಕತ್ತಿಯಿಂದ ಹೊಡೆದ ಗಾಯವಾಗಿದ್ದು. ತಕ್ಷಣ ಆರಕ್ಷಕ ಉಪ-ನಿರೀಕ್ಷರು ಆಕೆಯನ್ನು ಇಲಾಜು ಬಗ್ಗೆ ಹಾಸನದ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಯಿತು.

ಈ ಸಂಬಂಧವಾಗಿ ಬೇಲೂರು ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ ೧೦೬/೮೫, ಕಲಂ ೧೪೫, ೪೨೭, ೩೨೪ ಭಾರತೀಯ ದಂಡ ಸಂಹಿತೆಯ ಪ್ರಕಾರ ಗುನ್ನೆಯೊಂದನ್ನು ರಾಮಬೋವಿಯ ದೂರಿನ ಮೇಲೆ ದಾಖಲಿಸಲಾಗಿದೆ. ಮಂತ್ತೊಂದು ಪ್ರತಿದ್ವಂದ್ವಿ ಅಪರಾಧ ಸಂಖ್ಯೆ ೧೦೭/೮೫ ಕಲಂ ೧೪೫, ೪೨೭ ಭಾರತೀಯ ದಂಡ ಸಂಹಿತೆಯ ಪ್ರಕಾರ ರಾಜಬೋವಿಯ ದೂರಿನ ಮೇಲೆ ದಾಖಲಿಸಲಾಗಿದೆ. ಗ್ರಾಮದಲ್ಲಿ ಮುಂದೆ ಯಾವ ವಿಧವಾದ ಅಹಿತಕರ ಘಟನೆ ನಡೆಯದಂತೆ ಆರಕ್ಷರನ್ನು ನೇಮಿಸಲಾಗಿದೆ.

ಅದಾಗ್ಯೂ ಜನರು ಪೋಲೀಸ್ ಠಾಣೆಗೆ ಹೋದಾಗ ದಯ ದಾಕ್ಷಿಣ್ಯಗಳನ್ನು ತೋರಿಸದೆ ಹೊಡೆಯುತ್ತಾರೆಂಬ ಸಾಮಾನ್ಯ ಆಪಾದನೆಗಳು ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿಯ ಸದಸ್ಯರು ಆಪಾದನೆ ಮಾಡುತ್ತಿರುತ್ತಾರೆ. ಆದರೆ ಈ ಸಂದರ್ಭದಲ್ಲಿ ಅಂತಹ ಆಪಾದನೆಗಳು ಸತ್ಯಕ್ಕೆ ದೂರವಾಗಿದೆಯೆಂದು ತಿಳಿದು ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಸಚಿವರು ಹೇಳಿಕೆ ಓದಿದ್ದು ನೋಡಿ ನಗೂ ಬರುತ್ತದೆ. ಅವರು ತಮ್ಮ ಹೇಳಿಕೆಯಲ್ಲಿ—

> "ಬಸವರಾಜಪುರದ ಮತ್ತು ಇತರೆ ಅಕ್ಕಪಕ್ಕದ ರಾಮಬೊವಿಯ ನೆಂಟರಿಷ್ಟರು ವಿಷಯ ತಿಳಿದು ದೊಣ್ಣೆ ಮತ್ತು ಕೋಲು ಕತ್ತಿಗಳನ್ನು ಹಿಡಿದುಕೊಂಡು ನರಸೀಪುರ ಪಡ್ಡರಹಟ್ಟಿಗೆ ಬಂದು ರಾಜಬೋವಿಯ ಕಡೆಯವರ ಮೇಲೆ ಜಗಳ ಮಾಡುತ್ತಿದ್ದಾಗ ಆ ಸಮಯಕ್ಕೆ ಅಂದರೆ ೧೯-೧೦-೧೯೮೫ರಂದು ಸುಮಾರು ರಾತ್ರಿ ೧೧-೩೦ ಗಂಟೆಯ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು ತಮ್ಮ ಸಿಬ್ಬಂದಿಯೊಂದಿಗೆ ಪಡ್ಡರಹಟ್ಟಿ ಗ್ರಾಮಕ್ಕೆ ಬಂದಾಗ, ಗ್ರಾಮದಲ್ಲಿ ವಿದ್ಯುತ್ ಇಲ್ಲದೆ ಕತ್ತಲು ತುಂಬಿದ್ದರಿಂದ ಜನಗಳೆಲ್ಲಾ ಅವರವರ ಮನೆಯೊಳಗೆ ಇದ್ದರು. ನಿಜ ಸಂಗತಿಯನ್ನು ತಿಳಿಯಲು ಗ್ರಾಮಸ್ಥರನ್ನು ಕೋರಲಾಗಿ ಯಾರೊಬ್ಬರೂ ಮನೆಯಿಂದ ಹೊರಗೆ ಬರಲಿಲ್ಲ. ಆ ವೇಳೆಯಲ್ಲಿ ಬಸವರಾಜಪುರದ ರಾಮಬೋವಿಯ ಕಡೆಯವರು ಬಾಗಿಲುಗಳನ್ನು ತಟ್ಟುತ್ತಿದ್ದರು. ಆರಕ್ಷಕ ಉಪ ನಿರೀಕ್ಷಕರು ಪುನಃ ನಿಜ ಸಂಗತಿಯನ್ನು ಮನೆಯಿಂದ ಹೊರಗೆ ಬಂದು ತಿಳಿಸಿ ಎಂದು ವಿನಂತಿಸಿಕೊಂಡಾಗ ಕೆಲವರು ಮನೆಯ ಬಾಗಿಲುಗಳನ್ನು ತೆರೆದು ಹೊರಗೆ ಬಂದಾಗ ಬಸವರಾಜಪುರದ ರಾಮಬೋವಿಯ ಕಡೆಯವರು ದೊಣ್ಣೆ ಮತ್ತು ಕೋಲು ಕತ್ತಿಗಳಿಂದ
>
> ರಾಜಬೋವಿಯ ಕಡೆಯವರಿಗೆ ಹೊಡೆದರು."

—ಎಂದು ಇದೆ.

ಇದು ಆರಕ್ಷಕರು ಯಾರಿದ್ದಾರೆ ಅವರ ಕಣ್ಣೆದುರು ನಡೆದಿರತಕ್ಕ ದೃಶ್ಯ. ಇವರು ಹೋಗದೆ ಹೋಗಿದ್ದರೆ ಆ ಜಗಳವಾಗುತ್ತಿರಲಿಲ್ಲ. ಇವರು ಹೋದಮೇಲೆ ಜಗಳವಾಗಿದೆ, ಹೊಡೆದಾಟ ಬಡಿದಾಟವಾಗಿದೆ. ಹೆಣ್ಣುಮಕ್ಕಳಿಗೆ ಕತ್ತಿಯಿಂದ ತಿವಿದಿದ್ದಾರೆ. ಈ ಎಲ್ಲ ಕೃತ್ಯಗಳು ಸಬ್ ಇನ್ಸ್‌ಪೆಕ್ಟರ್ ಎದುರಿಗೆ ನಡೆದಿವೆ ಇವರು ಅದನ್ನು ತಡೆಯಲಿಕ್ಕೆ ಹೋಗಿದ್ದಾರೋ ಅಥವಾ ಪ್ರಚೋದನೆ ಮಾಡುವುದಕ್ಕೆ ಹೋಗಿದ್ದಾರೋ ? ಸಚಿವರ ಹೇಳಿಕೆಯನ್ನು ನೋಡಿದರೆ ಪ್ರಚೋದನೆ

ಮಾಡಿ ತೊಂದರೆ ಕೊಡುವುದಕ್ಕೆ ಹೋಗಿದ್ದಾರೆ ಅನ್ನಿಸುತ್ತದೆ. ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೇ, ಆರಕ್ಷಕ ಎಂಬ ಪದವನ್ನು ಬದಲಾವಣೆ ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ಸಲಹೆಯನ್ನು ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ರಾಮಂಬೋವಿಯವರದು ೩ ಮನೆಗಳು ಇವೆ. ಮಿಕ್ಕದ್ದೇ ೫೨ ಮನೆಗಳು ಇದೆ. ಬಹುಶಃ ಯಾವಾಗಲೂ ರಾತ್ರಿ ವೇಳೆಯಲ್ಲಿ ಹೆಂಗಸರಾದಿಯಾಗಿ ಕುಡಿದುಕೊಂಡು ಗಲಾಟೆ ಮಾಡಿಕೊಂಡು ಹೊಡೆದಾಡುತ್ತಾರೆ. ಈ ಎರಡೂ ಕಡೆಯವರಿಗೂ ಸಣ್ಣ ಒಂದು ಮರವನ್ನು ಕಡಿಯುವ ವಿಷಯದಲ್ಲಿ ಗಲಾಟೆಯಾಗಿದೆ ಕಡಿಮೆ ಜನ ಇರುವ ಅವರು ಹೆಚ್ಚು ಜನರನ್ನು ಸಂಗ್ರಹಿಸಿಕೊಂಡು ಗಲಾಟೆ ಮಾಡಿರುವುದು ನಿಜ. ಸರ್ ಇನ್ಸ್‌ಪೆಕ್ಟರ್ ಹೋಗಿರುವುದು ಗಲಾಟೆಯನ್ನು ತಪ್ಪಿಸುವುದಕ್ಕೋಸ್ಕರ ಹೋಗಿದ್ದಾರೆಯೇ ಹೊರತು ಪ್ರಚೋದನೆ ಮಾಡಲಿಕ್ಕೆ ಹೋಗಿಲ್ಲ. ಅಲ್ಲಿ ಲಾಠಿ ಛಾರ್ಜ್ ಮಾಡದಿದ್ದರೆ ಅನೇಕ ಜನ ಮರಣವನ್ನು ಅಪ್ಪುತ್ತಿದ್ದರು. ಆದ್ದರಿಂದ ಎರಡೂ ಕಡೆಯವರೂ ಕೇಸ್‌ಗಳನ್ನು ಹಾಕಿದ್ದಾರೆ. ಯಾರು ಇದರಲ್ಲಿ ಗಲಾಟೆ ಮಾಡಿದ್ದಾರೆ ಅವರನ್ನು ಕುಡುಗೋಲಿನಿಂದ ಹೊಡೆದಿರುವುದಿಲ್ಲ. ಅದಕ್ಕೋಸ್ಕರ ತಪಾಸಣೆಯನ್ನು ಮಾಡಿದ್ದೇವೆ. ಅಲ್ಲಿ ಅತಿರೇಕವಾಗಿದ್ದರೆ ಬಹುಶಃ ವೈಷಮ್ಯ ಕಾರಣಾಂತರಗುತ್ತದೆ ಗಲಾಟೆಯನ್ನು ತಪ್ಪಿಸುವುದಕ್ಕೋಸ್ಕರ ಹೋಗಿದ್ದಾರೆಯೇ ಹೊರತು ಪ್ರಚೋದನೆ ಮಾಡುವುದಕ್ಕೆ ಹೋಗಿಲ್ಲ. ೨೬ನೇ ತಾರೀಖು ನಿನ್ನೆ ಕೂಡ ಅಲ್ಲಿನ ಎಸ್.ಪಿ. ಅವರೂ ಕೂಡ ಹೋಗಿ ವಿಚಾರಣೆಯನ್ನು ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಇವತ್ತು ಇಂಥ ಗಲಾಟೆಗಳು ಈ ಕುಡುಕರ ಮಧ್ಯದಲ್ಲಿ ಆಗುವುದು ಉಂಟು. ಕೆಲವು ಹಳ್ಳಿಗಳಲ್ಲಿ ವ್ಯಾಜ್ಯಗಳು ಉಂಟು. ಅಲ್ಲಿ ತೊಂದರೆ ಆಗದೇ ಇರಲಿ ಎಂದು ಹೋಗಿದ್ದಾರೆಯೇ ಹೊರತು ಪ್ರಚೋದನೆಯನ್ನು ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಬಿ ಬಸವಲಿಂಗಪ್ಪ.—ಅಧ್ಯಕ್ಷರೇ, ದಯಮಾಡಿ ನೋಡಿ. ಎಷ್ಟು ಜನಕ್ಕೆ ತಲೆ ಹೊಡೆದಿದ್ದಾರೆ. ನಿಮ್ಮ ಆರಕ್ಷಕರು ಹೋದ ಮೇಲೆ ಈ ಸಂಭವ ಆಗಿದೆ. ನಾನಂ ಹೇಳುತ್ತಿದ್ದೇನೆ. ನೀವು ಹೋಗದೆ ಇದ್ದರೆ ಅದೂ ಆಗುತ್ತಾ ಇರಲಿಲ್ಲ ಮನೆಯ ಒಳಗಡೆ ಇದ್ದವರನ್ನು ಹೊರಗಡೆ ಕರೆದುಬಿಟ್ಟು ಮಾಡಿಸಿದ್ದೀರಿ ಏತಕ್ಕೆ ? ಮಾನ್ಯ ಗೃಹ ಸಚಿವರ ಹತ್ತಿರ ನನಗೆ ಮಾತನಾಡಲಿಕ್ಕೆ ಸ್ವಲ್ಪ ಸಂಕೋಚ. ತಾವು ದಕ್ಷರಾಗಿ ಜನಗಳಿಗೆ ಕಂಟ್ರೋಲ್ ಮಾಡಿ. ಅವರ ಮಾತನ್ನು ಕೇಳಬೇಡಿ. ನಾನು ಕೊಟ್ಟಿರುವುದನ್ನು ಓದಿ. ಅದು ಪ್ರಚೋದನೆ ಇಲ್ಲದೇ ಆಗುತ್ತದೆಯೇ ನೋಡಿ. ಖೂನಿ ಆದಮೇಲೆ ಮಹಜರ್ ಬರೆಯುವುದಕ್ಕೆ ಹೋಗುತ್ತೀರಿ. ನಮ್ಮ ರಾಜ್ಯದಲ್ಲಿ ಪೋಲೀಸರು ಇದ್ದಾರೋ ಇಲ್ಲವೋ ? ಅಲ್ಲಿ ಪೋಲೀಸರು ನೇತೃತ್ವದಲ್ಲಿ ಹೋದ ಮೇಲೆ ಇಂಥ ಒಂದು ಘಟನೆಯಾಗಿದೆ. ಆ ಘಟನೆಯನ್ನು ತಡೆಯಲಿಕ್ಕೆ ಅವರಿಗೆ ಶಕ್ತಿ ಇಲ್ಲ. ತಡೆದಿದ್ದೇವೆಂದು ಹೇಳುವುದಿಲ್ಲ ಘಟನೆ ಆಗಿ ಹೋಗಿದೆ ಎಂದು ಹೇಳುತ್ತೀರಿ, ಇಂಥ ಒಂದು ನಿಚ್ಚಳವಾಗಿರತಕ್ಕಂಥ ಅಶಕ್ತತನ ತಮ್ಮಲ್ಲಿದೆ. ಇದರಲ್ಲಿ ಯಾರ್ಯಾರು ಇದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನೀವು ತಯಾರಾಗಿದ್ದೀರಾ ?

ಶ್ರೀ ಬಿ. ರಾಚಯ್ಯ - ವಿಚಾರಣೆಯನ್ನು ಮಾಡಿದೆ. ಅವರು ತಪ್ಪಿತಸ್ಥರು ಅಲ್ಲ ಎಂದು ನನಗೆ ವರದಿ ಬಂದಿದೆ.

(೨) ಶ್ರೀ ಶಂಕರಿಕೊಪ್ಪ ಪರಿಶಿತ ಸಮಿತಿಯ ವರದಿ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಶ್ರೀ ಶಂಕರಿಕೊಪ್ಪ ಪರಿಶಿತ ಸಮಿತಿಯ ವರದಿ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ವ್ಯವಸಾಯ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ (ಕೃಷಿ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ. ರಾಜ್ಯ ಸರ್ಕಾರಕ್ಕೆ ಆಗಿಂದಾಗ್ಗೆ ಅನೇಕ ರೈತರ ಸಂಘ ಸಂಸ್ಥೆಗಳು ಅವರ ಬೇಡಿಕೆಗಳು ಬಗ್ಗೆ ಮಾನವಿ ಪತ್ರಗಳನ್ನು ಸಲ್ಲಿಸುತ್ತಿದ್ದಾರೆ. ಇವುಗಳ ಬಗ್ಗೆ ವಿಷಧವಾಗಿ ಅಭ್ಯಸಿಸಿ, ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು